# ನೋಟಾ ಮತಗಳ ವಿಶ್ಲೇಷಣೆ (2013 – 2017)

## ಸಾರಂಶ ಮತ್ತು ಮುಖ್ಯಾಂಶಗಳು

- ಕಳೆದ 5 ವರ್ಷಗಳಲ್ಲಿ ರಾಜ್ಯ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಯಲ್ಲಿ ಒಟ್ಟು 1,33,09,577 (1.33 ಕೋಟಿ) ಮತಗಳನ್ನು ನೋಟಾ ಪಡೆದುಕೊಂಡಿದೆ.
- ಕಳೆದ 5 ವರ್ಷಗಳಲ್ಲಿ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ನೋಟಾ ಸರಾಸರಿ 2,70,616 (2.70ಲಕ್ಷ) ಮತಗಳನ್ನು ಪಡೆದಿದೆ.
- ದೆಹಲಿಯ ಎನ್.ಸಿ.ಟಿ, ಗೋವಾ ಮತ್ತು ಆಂಧ್ರಪ್ರದೇಶದ ಉಪಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯ ಜನರು ನೋಟಾಗೆ ಮತ ಚಲಾಯಿಸಿದರು. ಇದರಿಂದ ಆಯಾ ಕ್ಷೇತ್ರಗಳಲ್ಲಿ **ನೋಟಾಗೆ** ಮತದಾನದ ಮೂರನೇ ಅಥವಾ ನಾಲ್ಕನೇ ಅತ್ಯಧಿಕ ಭಾಗವಾಗಿತ್ತು.
  - 2017ರ ಗೋವಾ ಉಪಚುನಾವಣೆಯ ಪಣಜಿ ಮತ್ತು ವಾಲ್ಪಾಯ್ ಕ್ಷೇತ್ರಗಳಲ್ಲಿ ಕ್ರಮವಾಗಿ 301 (1.94%) ಮತ್ತು 458 (1.99%) ನೋಟಾ ಮತಗಳು ಮೂರನೇ ಸ್ಥಾನ ಹೊಂದಿದೆ.
  - 2017ರ ದೆಹಲಿಯ ಎನ್.ಸಿ.ಟಿ. ಬಾವ್ನಾ ಉಪಚುನಾವಣೆಯಲ್ಲಿ ನೋಟಾ 1,413(1.07%) ಮತಗಳು ಗಳಿಸಿ ನಾಲ್ಕನೇ ಸ್ಥಾನ ಹೊಂದಿದೆ.
  - 2017ರ ಆಂಧ್ರಪ್ರದೇಶದ ನಂದ್ಯಾಲ್ ಕ್ಷೇತ್ರದ ಉಪಚುನಾವಣೆಯಲ್ಲಿ ನೋಟಾ 1,231 (0.71%) ಅತಿ ಹೆಚ್ಚು ಮತಗಳನ್ನು ಪಡೆದು ನಾಲ್ಕನೇ ಸ್ಥಾನ ಪಡೆದಿದೆ. ಕ್ಷೇತ್ರದ ಇತರ 12 ಅಭ್ಯರ್ಥಿಗಳಿಗಿಂತ ಹೆಚ್ಚು ಮತಗಳನ್ನು ಪಡೆದುಕೊಂಡಿದೆ.

- 2014ರ ಲೋಕಸಭೆ ಚುನಾವಣೆಯಲ್ಲಿ ನೋಟಾವನ್ನು ಮೊದಲ ಬಾರಿಗೆ ಪರಿಚಯಿಸಲಾಯಿತು. ಒಟ್ಟಾರೆ ನೋಟಾ 60,02,942 (1.08%) ಮತಗಳನ್ನು ಪಡೆದುಕೊಂಡಿದೆ. ಲೋಕಸಭೆ ಚುನಾವಣೆಯಲ್ಲಿ ನೋಟಾ ಮತಗಳ ಪೈಕಿ, ಅತಿ ಹೆಚ್ಚು ಮತಗಳು ಅಂದರೆ ತಮಿಳುನಾಡಿನ ನೀಲ್‌ಗಿರೀಸ್ ಕ್ಷೇತ್ರದ 46,559 ಮತಗಳು, ಲಕ್ಷದ್ವೀಪದಲ್ಲಿ ಕನಿಷ್ಠ ಮತಗಳು (123) ನೋಟಾ ಗೆದ್ದುಕೊಂಡಿದೆ.
- ವಿಧಾನಸಭೆ ಚುನಾವಣೆಗಳಲ್ಲಿ ನೋಟಾ 2015ರ ಎರಡು ರಾಜ್ಯ ವಿಧಾನಸಭೆ ಚುನಾವಣೆಗಳಲ್ಲಿ ಮತಗಳನ್ನು ಪಡೆದುಕೊಂಡಿದೆ – 2.08% (9,83,176 ಮತಗಳು) ; ಬಿಹಾರದಲ್ಲಿ (9,47,279) ಎನ್.ಸಿ.ಟಿ. ದೆಹಲಿಯಲ್ಲಿ (35,897 ಮತಗಳು).
- 2014ರಲ್ಲಿ ಒಟ್ಟಾಗಿ ನಡೆದ ಎಂಟು ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ನೋಟಾ ಅತಿ ಕಡಿಮೆ ಮತಗಳು ಅಂದರೆ 0.91% (14,10,644 ಮತಗಳು) ಪಡೆದಿದೆ. ಆಂಧ್ರಪ್ರದೇಶ (3,08,286 ಮತಗಳು) ಅರುಣಾಚಲ ಪ್ರದೇಶ (5,322 ಮತಗಳು) ಹರ್ಯಾಣ (53,613 ಮತಗಳು), ಜಮ್ಮು ಮತ್ತು ಕಾಶ್ಮೀರ (49,129 ಮತಗಳು), ಜಾರ್ಖಂಡ್ (2,35,039 ಮತಗಳು), ಮಹಾರಾಷ್ಟ್ರ (4,83,459 ಮತಗಳು) ಒಡಿಶಾ (2,71,336) ಮತ್ತು ಸಿಕ್ಕಿಂ (4,460).

- 2013ರಲ್ಲಿ ಅದು ಅನುಷ್ಠಾನವಾದಾಗಿನಿಂದ 2015ರ ಬಿಹಾರದ ವಿಧಾನಸಭೆ ಚುನಾವಣೆಯಲ್ಲಿ ಅತಿಹೆಚ್ಚು (9,47,279 ಮತಗಳು) ನೋಟಾ ಪಡೆದಿದೆ. ಮತ್ತು 2013ರ ಮಿಜೋರಾಂ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಅತಿ ಕಡಿಮೆ ಸಂಖ್ಯೆಯ (3,810 ಮತಗಳು) ಪಡೆದಿದೆ.
- ಛತ್ತೀಸ್ಗಢ್ 2013ರ ವಿಧಾನಸಭೆ ಚುನಾವಣೆಯಲ್ಲಿ ನೋಟಾ, ಮತದಾನದಲ್ಲಿ ಅತಿ ಹೆಚ್ಚು ಪಾಲು (3.06%) ಪಡೆದಿದೆ.
- 2015ರ ದೆಹಲಿ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ನೋಟಾ, ಅತಿ ಕಡಿಮೆ ಪಾಲು (0.40%) ಮತಗಳನ್ನು ಪಡೆದಿದೆ.
- ಕ್ಷೇತ್ರವಾರು, ಮಹಾರಾಷ್ಟ್ರ ಗಡ್ಚಿರೋಲಿ ಕ್ಷೇತ್ರದಲ್ಲಿ ನೋಟಾ 17,510 ಮತಗಳನ್ನು ಪಡೆದರೆ ಅತಿ ಕಡಿಮೆ ಎಂದರೆ 7 ಮತಗಳನ್ನು ಅರುಣಾಚಲ ಪ್ರದೇಶದ ಮರಿಯಾಂಗೇಕು ಕ್ಷೇತ್ರದಲ್ಲಿ ಪಡೆದಿದೆ.
- ಅರುಣಾಚಲ ಪ್ರದೇಶದ ಕೆಲ ಕ್ಷೇತ್ರಗಳಲ್ಲಿ ಅವೆಂದರೆ ಮುಕ್ತೋ, ಧೀರಂಗ್, ಸೆಪ್ಪಾ ವೆಸ್ಟ್, ಪಕ್ಕೆ ಖೇಸಂಗ್, ದೋಯ್ಮುಖ್, ಸಾಗಲಿ, ಪಾಲಿನ್, ನ್ಯಾಪಿನ್, ನಚೋ, ತಲಿಹ & ಮೆಬೋದಲ್ಲಿ **ನೋಟಾ** ಯಾವುದೇ ಮತವನ್ನು ಪಡೆದಿಲ್ಲ.
- ಕೆಂಪು ಎಚ್ಚರಿಕೆ ಕ್ಷೇತ್ರಗಳೆಂದರೆ ಅಪರಾಧ ಪ್ರಕರಣ ಹೊಂದಿರುವ 3 ಅಥವಾ ಹೆಚ್ಚು ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸುವಂತಹ ಕ್ಷೇತ್ರ. ವಿಧಾನಸಭೆಯ ಕೆಂಪು ಎಚ್ಚರಿಕೆ ಕ್ಷೇತ್ರಗಳಲ್ಲಿ ನೋಟಾ 22,94,904 (22.94 ಲಕ್ಷ) ಮತಗಳನ್ನು ಪಡೆದಿದೆ.
- ಛತ್ತೀಸ್ಗಢ್ ಕೆಂಪು ಎಚ್ಚರಿಕೆ ಕ್ಷೇತ್ರಗಳಲ್ಲಿ ನೋಟಾ ಅತ್ಯಧಿಕ ಶೇಕಡ ಮತಗಳನ್ನು ಪಡೆದುಕೊಂಡಿದೆ. 10 ಕೆಂಪು ಎಚ್ಚರಿಕೆ ಕ್ಷೇತ್ರಗಳಲ್ಲಿ ನೋಟಾ 2.68% (39,896) ಮತಗಳನ್ನು ಪಡೆದಿದೆ.
- ದೆಹಲಿ ಮತ್ತು ಮಹಾರಾಷ್ಟ್ರದ ಮಹಾನಗರ ಪಾಲಿಕೆ ಚುನಾವಣೆಗಳಲ್ಲಿ ನೋಟಾ ಅತಿ ಹೆಚ್ಚು ಶೇಕಡವಾರು ಮತಗಳ ಪಾಲು ಪಡೆದಿದೆ. ಅವು ಉಲ್ಲಾಸ್ನನಗರದಲ್ಲಿ 4.58% ಮತ್ತು **ಅತಿ** ಕಡಿಮೆ ಶೇಕಡವಾರು ಮತಗಳ ಪಾಲು 0.58% ಪೂರ್ವ ದೆಹಲಿ ಪುರಸಭೆಯಲ್ಲಿ ಪಡೆದಿದೆ.
- 2017ರ ದೆಹಲಿ ಪುರಸಭೆ ಚುನಾವಣೆಯಲ್ಲಿ ನೋಟಾ 49,235 ಮತಗಳನ್ನು ಪಡೆದಿದೆ. ಉತ್ತರ ಭಾಗದಲ್ಲಿ ನೋಟಾ ಅತಿ ಹೆಚ್ಚು ಎಂದರೆ 19,762 ಮತಗಳನ್ನು ಪಡೆದಿದೆ.
- ಮಹಾರಾಷ್ಟ್ರದ ಪ್ರತಿ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ನೋಟಾ 1.5%ಗಿಂತ ಹೆಚ್ಚು ಮತಗಳನ್ನು ಪಡೆದಿದೆ.

## ಶಿಫಾರಸುಗಳು

- ಯಾವುದೇ ಮತಕ್ಷೇತ್ರದಲ್ಲಿ ನೋಟಾಗೆ ಮಾಡಲ್ಪಟ್ಟ ಮತದಾನವು ಎಲ್ಲಾ ಸ್ಪರ್ಧಾತ್ಮಕ ಅಭ್ಯರ್ಥಿಗಳಿಗಿಂತ ಹೆಚ್ಚಿದ್ದಲ್ಲಿ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಬೇಕು:

    - ಯಾವುದೇ ಅಭ್ಯರ್ಥಿಗಳನ್ನು ಚುನಾಯಿತರೆಂದು ಘೋಷಿಸಬಾರದು

- ಹೊಸದಾಗಿ ಚುನಾವಣೆ ನಡೆಸಬೇಕು. ಅದರಲ್ಲಿ ಹಿಂದೆ ಸ್ಪರ್ಧಿಸಿದ್ದ ಯಾವ ಅಭ್ಯರ್ಥಿಗೂ ಸ್ಪರ್ಧಿಸಲು ಅವಕಾಶ ಕೊಡಬಾರದು ಮತ್ತು
- ಹೊಸ ಚುನಾವಣೆಗಳಲ್ಲಿ ಯಾವ ಅಭ್ಯರ್ಥಿಗೆ 50%+1 ಮತಗಳು ಚಲಾವಣೆಯಾಗಿರುತ್ತದೋ ಆ ಅಭ್ಯರ್ಥಿಯನ್ನು ಚುನಾಯಿತ ಎಂದು ಘೋಷಿಸಬೇಕು.